ಓ .ಎಸ್ ನಂ: 38/2020
ಪಿಡಬ್ಲ್ಯೂ: 2
ದಿನಾಂಕ: 06.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಪಿ ಎಂ ವಕೀಲರಿಂದ:

ವಾದಿ ವೆಂಕಟೇಶ್ ನನ್ನ ತಮ್ಮ .ದಾವಾ ಸ್ವತ್ತು ಮೊದಲು ಯಾರ ಹೆಸರಿನಲ್ಲಿ ಇತ್ತು ಎಂದರೆ ಆ ಬಗ್ಗೆ ಗೊತ್ತಿಲ್ಲ . ಸದರಿ ಸ್ವತ್ತನ್ನು ಮುಸ್ಲಿಂ ಹೆಣ್ಣು ಮಗಳಿಂದ ಖರೀದಿ ಮಾಡಲಾಗಿದೆ ಎನ್ನುತ್ತಾರೆ. ದಾವಾ ಸ್ವತ್ತು ಖರೀದಿ ಮಾತುಕತೆ ಸಮಯದಲ್ಲಿ ನಾನು ಇದ್ದೇನೇ ಅಂದರೆ ಇಲ್ಲ, ಆದರೆ ನೊಂದಣಿ ಸಮಯದಲ್ಲಿ ಇದ್ದೆ ಎನ್ನುತ್ತಾರೆ. ನನ್ನ ತಮ್ಮ ದಾವಾ ಸ್ವತ್ತು ನೊಂದಣಿ ಮಾಡಿಸಿಕೊಳ್ಳುವ ಪೂರ್ವದಲ್ಲಿ ಸ್ವತ್ತಿನ ದಾಖಲೆಗಳನ್ನು ಪರೀಶೀಲಿಸಿ ಸ್ಥಳವನ್ನು ನೊಂದಣಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಎಲ್ಲಾ ದಾಖಲೆಗಳು ಸರಿಯಾಗಿ ಇದುದರಿಂದ ನೊಂದಣಿ ಆಗಿದೆ ಎಂದರೆ ಸರಿ . ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ತಮ್ಮನ ಜೊತೆಯಲ್ಲಿ ರಾಜಾಸಿಂಗ್ ಎನ್ನುವವರು ಸಹ ಹೋಗಿದ್ದರು ಎಂದರೆ ಸರಿ . ರಾಜಾಸಿಂಗ್ ಎಡಿಎಂಕೆ ಎಕ್ಸ್ ಎಂ ಎಲ್ ಎ ಅವರ ಬಲಗೈ ಬಂಟ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ರಾಜಾಸಿಂಗ್ ಮತ್ತು ನನ್ನ ತಮ್ಮನ ನಡುವೆ ಗೆಳೆತನ ಇದೆ ಎಂದರೆ ಇಲ್ಲ ಆದರೆ ಸ್ವತ್ತಿನ ಬಗ್ಗೆ ಅವರೇ ಹೇಳಿರುತ್ತಾರೆ ಎನ್ನುತ್ತಾರೆ. ರಾಜಾಸಿಂಗ್ ನನ್ನ ತಮ್ಮನ ಗೆಳಯನಾಗದೇ ಹೋದರೆ ದಾವಾ ಸ್ವತ್ತಿನ ವಿಚಾರವನ್ನು ರಾಜಾಸಿಂಗ್ ನನ್ನ ತಮ್ಮನಿಗೆ ಹೇಗೆ ಹೇಳಿರುತ್ತಾರೆ ಎಂದರೆ ಅವರಾಗೇ ಬಂದು ಹೇಳಿರುತ್ತಾರೆ ಎನ್ನುತ್ತಾರೆ. ದಾವ ಸ್ವತ್ತನ್ನು ನನ್ನ ತಮ್ಮ 1 ಲಕ್ಷ 50 ಸಾವಿರ ರೂ ಗೆ ಖರೀದಿ ಮಾಡಲು ಒಪ್ಪಿರುತ್ತಾರೆ ಎಂದರೆ ಇಲ್ಲ , 6 ಲಕ್ಷ 50 ಸಾವಿರ ಎನ್ನುತ್ತಾರೆ. ನನ್ನ ತಮ್ಮ ದಾವಾ ಸ್ವತ್ತನ್ನು 6 ಲಕ್ಷ 50 ಸಾವಿರ ರೂ. ಗಳಿಗೆ ಖರೀದಿ ಮಾಡಿರುತ್ತಾರೆಂದು ತೋರಿಸಲು ದಾಖಲೆ ಇದೆಯಾ ಅಂದರೆ ಪತ್ರ ಇದೆ ಎನ್ನುತ್ತಾರೆ. 6 ಲಕ್ಷ 50 ಸಾವಿರ ರೂ. ಗೆ ಯಾವುದೇ ಸ್ವತ್ತು ಮಾರಾಟ ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಲಕ್ಷ 50 ಸಾವಿರ ಕೈಗೆ ಕೊಟ್ಟಿದ್ದು ಸ್ವತ್ತಿನ ನೊಂದಣಿ ಮೌಲ್ಯ 4 ಲಕ್ಷ 13 ಸಾವಿರಕ್ಕೆ ನೊಂದಣಿ ಆಗಿರುತ್ತದೆ ಎನ್ನುತ್ತಾರೆ. ಈ ಮೇಲೆ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ . ರಾಜಾಸಿಂಗ್ ಈಗಲೂ ಜೀವಂತವಾಗಿದ್ದಾರೆ ಎಂದರೆ ಸರಿ . ದಾವಾ ಸ್ವತ್ತನ್ನು 1 ಲಕ್ಷ 50 ಸಾವಿರಕ್ಕೆ ಮಾರಾಟ ಮಾಡಿಸಲು ರಾಜಾಸಿಂಗ್ ಒಂದನೇ ಪ್ರತಿವಾದಿಯನ್ನು ಬಂಗಾರಪೇಟೆ ನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಭಕ್ತ ವತ್ಸಲಂ ರವರೊಂದಿಗೆ ರಾಜಾಸಿಂಗ್ ಬಹಳಷ್ಟು ಕೇಸುಗಳಿಗೆ

ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಅವರಿಗೂ ನಮಗೂ ಯಾವೂದೇ ಸಂಬಂಧ ಇಲ್ಲ ಅವರ ಮೇಲೆ ಯಾವ ಯಾವ ಕೇಸು ಇದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೊಂದಣಿ ಕಾಲಕ್ಕೆ 1 ನೇ ಪ್ರತಿವಾದಿ ಗಂಡ ತೀರಿಕೊಂಡಿದ್ದರು ಎಂದರೆ ಸರಿ . ನೊಂದಣಿ ಸಮಯದಲ್ಲಿ ಅವರ ಮಕ್ಕಳು ಅಪ್ರಾಪ್ತ ವಯಸ್ಕರು ಎಂದರೆ ಸರಿಯಲ್ಲ .ನೊಂದಣಿ ಸಮಯದಲ್ಲಿ 1 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೌಲ್ಯ ಕೇವಲ 50 ಸಾವಿರ ನೀಡಿರುತ್ತಾರೆ ಎಂದರೆ ಸರಿಯಲ್ಲ , 6 ಲಕ್ಷ 50 ಸಾವಿರ ನೀಡಿರುತ್ತಾರೆ ಎನ್ನುತ್ತಾರೆ. 6 ಲಕ್ಷ 50 ಸಾವಿರ ನೀಡಿಲ್ಲ , 1 ವರೆ ಲಕ್ಷಕ್ಕೆ ಮಾತುಕತೆ ಆಗಿ ಬರೀ 50 ಸಾವಿರ ಅವರಿಗೆ ನೀಡಿ ಉಳಿದ 1 ಲಕ್ಷ ಹಣವನ್ನು ನನ್ನ ತಮ್ಮ ಮತ್ತು ರಾಜಾಸಿಂಗ್ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಉಳಿದ 1 ಲಕ್ಷ ಹಣವನ್ನು ಕೇಳಿದ್ದಕ್ಕೆ ರಾಜಾಸಿಂಗ್ 1 ನೇ ಪ್ರತಿವಾದಿಗೆ ಹಣವನ್ನು ಕೊಡುವುದಿಲ್ಲ ಕೇಳಿದರೆ ಜೀವಂತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೆ ಪ್ರತಿವಾದಿಯ ಸ್ವತ್ತನ್ನು ಪಡೆದು ಪೂರ್ತಿ ಹಣ ಕೊಡದೇ ನೊಂದಣಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ನೊಂದಣಿ ಆಗುವ ಸಮಯದಲ್ಲಿ ನೊಂದಣಿ ಆದ ನಂತರ ಹಣವನ್ನು ನೀಡುತ್ತೇವೆ ಎಂದು ಹೇಳಿ ನಾನು , ನನ್ನ ತಮ್ಮ ಮತ್ತು ರಾಜಾಸಿಂಗ್ 1 ನೇ ಪ್ರತಿವಾದಿಗೆ ಹಣ ನೀಡದೇ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ .

1 ನೇ ಪ್ರತಿವಾದಿ ವಿಧವೆ ಹೆಣ್ಣು ಮಗಳು ಅವರಿಗೆ ಅಪ್ರಾಪ್ತ ವಯಸ್ಸಿನ ಮಕ್ಕಳು ಇರುವುದರಿಂದ ನಮ್ಮ ಬೆದರಿಕೆಗೆ ಸುಮ್ಮನೆ ಆಗಿರುತ್ತಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ನಾನು ಏನು ಮಾಡಿಲ್ಲ ಎನ್ನುತ್ತಾರೆ. ಅದೇ ರೀತಿ ರಾಜಾಸಿಂಗ್ ಒಳ್ಳೆ ವ್ಯಕ್ತಿ ಅಲ್ಲ ಎಂದು ಹೇಳಿ 1 ನೇ ಪ್ರತಿವಾದಿಗೆ ಊರಿನವರೂ ಸಹ ಸಹಾಯ ಮಾಡಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ನೊಂದಣಿ ಸಮಯದಲ್ಲಿ ಕೇವಲ 50 ಸಾವಿರ ಮಾತ್ರ ಸೇರಿದೆ ಎಂದರೆ ಸರಿಯಲ್ಲ , 6 ಲಕ್ಷ 50 ಸಾವಿರ ಹಣವನ್ನು 1 ನೇ ಪ್ರತಿವಾದಿ ಕೈಗೆ ನೀಡಿರುತ್ತೇವೆ ಎನ್ನುತ್ತಾರೆ. ಸ್ವತ್ತಿನ ನೊಂದಣಿ ದಿನಾಂಕ ಯಾವುದು ಎಂದರೆ ಗೊತ್ತಿಲ್ಲ 7 ನೇ ತಿಂಗಳು 2017 ನೇ ಇಸವಿ ಎನ್ನುತ್ತಾರೆ. ದಾವಾ ಸ್ವತ್ತು ನೊಂದಣಿ ಆದ ನಂತರ ಖಾತಾ ವರ್ಗಾವಣೆಗೆ ನನ್ನ ತಮ್ಮ ಅರ್ಜಿ ನೀಡಿರುತ್ತಾರೆಯೇ ಅಂದರೆ ಗೊತ್ತಿಲ್ಲ ಸ್ವತ್ತು ಖರೀದಿ ಆದ ನಂತರ ಸ್ಥಳಕ್ಕೆ ಹೋಗಿ ನೋಡಿದ್ದು ಆಗ ಅದು ನಮ್ಮ ಸ್ವತ್ತು ಅಲ್ಲ ಎಂದು ಅಲ್ಲಿನವರು ಹೇಳಿರುತ್ತಾರೆ ಎನ್ನುತ್ತಾರೆ. ಯಾರು ಹೇಳಿದರು ಎಂದರೆ ವೆಂಕಟೇಶ್ ಎನ್ನುವ

ವ್ಯಕ್ತಿ ಹೇಳಿರುತ್ತಾರೆ ಆ ಸಮಯದಲ್ಲಿ ನಾವು ದಾವಾ ಸ್ವತ್ತನ್ನು ಸ್ವಚ್ಚ ಮಾಡಲು ಹೋಗಿದ್ದೆವು ಎನ್ನುತ್ತಾರೆ. ಯಾವಾಗ ಹೋಗಿರುತ್ತೇವೆ ಎಂದರೆ ಖರೀದಿ ಮಾಡಿದ 6 ತಿಂಗಳು 1 ವರ್ಷಕ್ಕೆ ಹೋಗಿರುತ್ತೇವೆ ಎನ್ನುತ್ತಾರೆ. ಸದರಿ ವೆಂಕಟೇಶ್ ಮೇಲೆ ಸ್ವತ್ತು ನಮ್ಮದ್ದಲ್ಲ ಎಂದು ತಕರಾರು ಮಾಡಿದ್ದಕ್ಕೆ ಅವರ ಮೇಲೆ ಕೇಸನ್ನೇನಾದರೂ ಹಾಕಿರುತೀರಾ ಎಂದರೆ ಠಾಣೆಗೆ ಹೋಗಿದ್ದು ಇಬ್ಬರ ದಾಖಲೆಗಳನ್ನು ಪೋಲೀಸರು ತರಲು ಹೇಳಿದ್ದು ಅವುಗಳನ್ನು ನೋಡಿ ಅವರ ದಾಖಲೆಯು ಸರಿ ಇದೆ ಎಂದು ಹೇಳಿದ ನಂತರ ಸ್ವತ್ತು ಬೇಡ ಎಂದು ನಾವು 1 ನೇ ಪ್ರತಿವಾದಿ ಬಳಿ ಹೋಗಿರುತ್ತೇವೆ ಎನ್ನುತ್ತಾರೆ. ತಕ್ಷಣವೇ ನಾವು ಸದರಿ ವೆಂಕಟೇಶ್ ಮತ್ತು 1 ನೇ ಪ್ರತಿವಾದಿ ವಿರುದ್ಧ ಯಾವುದಾದರೂ ದಾವೆಯನ್ನು ಸಲ್ಲಿಸಿರುತ್ತೇವೆಯೇ ಅಂದರೆ ಇಲ್ಲ ಎನ್ನುತ್ತಾರೆ. ಎಷ್ಟು ವರ್ಷಗಳ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸುಮಾರು 2 ವರ್ಷಗಳ ನಂತರ ಎನ್ನುತ್ತಾರೆ. ನಾವು ಮತ್ತು ಸ್ವತ್ತಿನ ಬಳಿ ಇದ್ದಂತಹ ವೆಂಕಟೇಶ್ ಎನ್ನುವವರು ಸೇರಿಕೊಂಡು ಈ ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಸ್ವತ್ತು ಸರಿ ಇಲ್ಲ ಎಂದರೆ ದುಡ್ಡು ವಾಪಸ್ ಕೊಡಲಾಗುವುದು ಎಂದು ಏನಾದರೂ ಷರತ್ತು ಇದೆಯಾ ಅಂದರೆ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಸಂಬಂಧ ನಾವು ಯಾವುದೇ 6 ವರೆ ಲಕ್ಷ ಹಣವನ್ನು ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ . ಆ ಸಮಯದಲ್ಲಿ ನನ್ನ ತಮ್ಮನ ಬಳಿ 6 ವರೆ ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆ ನೀಡಿರುತ್ತೀರಾ ಎಂದರೆ ನನ್ನ ತಮ್ಮನಿಗೆ ಗೊತ್ತು ಎನ್ನುತ್ತಾರೆ. ನಾನು ನನ್ನ ತಮ್ಮನ ಮಾತುಕೇಳಿ ರಾಜಾಸಿಂಗ್ ಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್